Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

(EXTRAORDINARY)

ವಿಶೇಷ ಸಂಚಿಕೆ

भाग–IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं–1 | नई दिल्ली मंगलवार मार्च–13 1984 | रुधिरोद्गारि 1905 (शक) | खण्ड–1 |
| No. 1 | New Delhi Tuesday, March 13, 1984 | Rudhirodgari-1905 (Saka) | Vol. 1 |
| ಸಂಖ್ಯೆ ೧ | ನವದೆಹಲಿ ಮಂಗಳವಾರ, ಮಾರ್ಚ್ ೧೩, ೧೯೮೪ | ರುಧಿರೋದ್ಗಾರಿ-೧೯೦೫ (ಶಕ) | ಸಂಪುಟ ೧ |


## MINISTRY OF LAW, JUSTICE & COMPANY AFFAIRS

(Legislative Department)

New Delhi, September 16, 1983/Rudhirodgari 1905 (Sakha)

The translations in Kannada of the foloowing namely—(1) The wakf Act, 1954, (2) The Railway property (unlawful possession) Act, 1966 (3) The Telegraph wires (unlawful possession) Act, 1950 (4) The Disputed Elections (Prime minister and speaker) Act, 1977 (5) The Dock workers (Regulation of employment) Act, 1943 are hereby published under the authority of the president and shall be deemed to be the authorised translations thereof in Kannada under clause (a) of Section 2 of the authorised Translations (central lwas) Act, 1973 (50 of 1973).

ಕೆಳಕಂಡ ಅಧಿನಿಯಮಗಳ ಎಂದರೆ,–(೧) ವಕ್ಫ್ ಅಧಿನಿಯಮ ೧೯೫೪ (೨) ರೈಲ್ವೆ ಸ್ವತ್ತಿನ (ಕಾನೂನು ವಿರುದ್ಧ ಸ್ವಾಧೀನ) ಅಧಿನಿಯಮ, ೧೯೬೬ (೩) ಟೆಲಿಗ್ರಾಫ್ ತಂತಿಗಳ (ಕಾನೂನು ವಿರುದ್ಧ ಸ್ವಾಧೀನ) ಅಧಿನಿಯಮ, ೧೯೫೦ (೪) ಪ್ರಧಾನ ಮಂತ್ರಿ ಮತ್ತು ಅಧ್ಯಕ್ಷರ) ವಿವಾದಿತ ಚುನಾವಣಾ ಅಧಿನಿಯಮ, ೧೯೭೭ (೫) ಹಡಗುಕಟ್ಟೆ ಕೆಲಸಗಾರರ (ನಿಯೋಜನಾ ವಿನಿಮಯಗಳ) ಅಧಿನಿಯಮ, ೧೯೪೮–ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ (ಕೇಂದ್ರ ಕಾನೂನುಗಳ) ಅಧಿನಿಯಮ, ೧೯೭೩ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದು.

# ಹಡಗು ಕಟ್ಟೆ ಕೆಲಸಗಾರರ (ನಿಯೋಜನಾ ವಿನಿಯಮನ) ಅಧಿನಿಯಮ, 1948

(1948ರ ಅಧಿನಿಯಮ ಸಂಖ್ಯೆ 9)

[ಸೆಪ್ಟೆಂಬರ್ 1, 1983 ರಂದು ಜಾರಿಯಲ್ಲಿದ್ದಂತೆ] [4ನೇ ಮಾರ್ಚ್, 1948

ಹಡಗು ಕಟ್ಟೆ ಕೆಲಸಗಾರರ ನಿಯೋಜನೆಯನ್ನು ವಿನಿಯಮನಗೊಳಿಸುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

ಹಡಗು ಕಟ್ಟೆ ಕೆಲಸಗಾರರ ನಿಯೋಜನೆಯನ್ನು ವಿನಿಯಮನಗೊಳಿಸುವುದಕ್ಕಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ ;

ಇದನ್ನು ಈ ಮೂಲಕ ಕೆಳಕಂಡಂತೆ ಅಧಿನಿಯಮಿಸಲಾಗಿದೆ :—

1. ಸಂಕ್ಷಿಪ್ತ ಹೆಸರು ಮತ್ತು ವ್ಯಾಪ್ತಿ :— (1) ಈ ಅಧಿನಿಯಮವನ್ನು ಹಡಗು ಕಟ್ಟೆ ಕೆಲಸಗಾರ (ನಿಯೋಜನಾ ವಿನಿಯಮನ) ಅಧಿನಿಯಮ, 1948 ಎಂದು ಕರೆಯತಕ್ಕದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

2. ಪರಿಭಾಷೆಗಳು.—ಈ ಅಧಿನಿಯಮದಲ್ಲಿ ವಿಷಯ ಅಥವಾ ಸಂದರ್ಭಕ್ಕೆ ವಿರುದ್ಧವಾಗಿ ಏನಾದರೂ ಇದ್ದ ಹೊರತು,—

(ಕ) ''ಮಂಡಲಿ'' ಎಂದರೆ, 5ಕ ಪ್ರಕರಣದ ಮೇರೆಗೆ ಸ್ಥಾಪಿತವಾದ ಹಡಗು ಕಟ್ಟೆ ಕಾರ್ಮಿಕ ಮಂಡಲಿ ;

(ಕಕ) ''ಸರಕು'' ಎಂಬುದು ಹಡಗಿನಲ್ಲಿ ಅಥವಾ ಇತರ ನೌಕೆಯಲ್ಲಿ ಒಯ್ಯಲಾಗುವ ಅಥವಾ ಒಯ್ಯಬೇಕಾದ ಯಾವುದೇ ವಸ್ತುವನ್ನು ಒಳಗೊಳ್ಳುತ್ತದೆ ;

(ಖ) ''ಹಡಗು ಕಟ್ಟೆ ಕೆಲಸಗಾರ'' ಎಂದರೆ, ಸರಕುಗಳನ್ನು ಹೇರುವ ಇಳಿಸುವ, ಸಾಗಿಸುವ ಅಥವಾ ದಾಸ್ತಾನು ಮಾಡುವ ಸಂಬಂಧದಲ್ಲಿನ ಕೆಲಸದಲ್ಲಿ ಅಥವಾ ಸರಕುಗಳನ್ನು ಸ್ವೀಕರಿಸಲು ಅಥವಾ ಇಳಿಸಲು ಅಥವಾ ಬಂದರು ಬಿಡಲು ಹಡಗುಗಳನ್ನು ಅಥವಾ ಇತರ ನೌಕೆಗಳನ್ನು ಸಜ್ಜುಗೊಳಿಸುವ ಸಂಬಂಧದ ಕೆಲಸದಲ್ಲಿ ಯಾವುದೇ ಬಂದರಿನಲ್ಲಿ ಅಥವಾ ಅದರ ಆಸುಪಾಸಿನಲ್ಲಿ ನಿಯೋಜಿತನಾದ ಅಥವಾ ನಿಯೋಜಿತನಾಗಬೇಕಾದ ವ್ಯಕ್ತಿ ;

(ಗ) ಹಡಗು ಕಟ್ಟೆ ಕೆಲಸಗಾರನಿಗೆ ಸಂಬಂಧಿಸಿ ''ನಿಯೋಜಕ'' ಎಂದರೆ, ಮೇಲೆ ಹೇಳಿದಂತೆ ಯಾವ ವ್ಯಕ್ತಿಯಿಂದ ಅವನು ನಿಯೋಜಿತನಾಗಿರುವನೋ ಅಥವಾ ನಿಯೋಜಿತನಾಗಬೇಕಾಗಿದೆಯೋ ಆ ವ್ಯಕ್ತಿ ;

(ಘ) ಯಾವುದೇ ಪ್ರಮುಖ ಬಂದರಕ್ಕೆ ಸಂಬಂಧಿಸಿ "ಸರ್ಕಾರ'' ಎಂದರೆ, ಕೇಂದ್ರ ಸರ್ಕಾರ, ಮತ್ತು ಯಾವುದೇ ಇತರ ಬಂದರಕ್ಕೆ ಸಂಬಂಧಿಸಿ, ರಾಜ್ಯ ಸರ್ಕಾರ ;

(ಙ) ''ಯೋಜನೆ'' ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ಯೋಜನೆ.

3. ಕೆಲಸಗಾರರ ನಿಯತ ನಿಯೋಜನೆಯನ್ನು ಸುನಿಶ್ಚಿತಗೊಳಿಸುವುದಕ್ಕಾಗಿ ಯೋಜನೆ.—(1) ಬಂದರಿನಲ್ಲಿ ಹಡಗುಕಟ್ಟೆ ಕೆಲಸಗಾರರ, ಅವರು ನೋಂದಾಯಿತರಾಗಿರಲಿ ಅಥವಾ ಇಲ್ಲದಿರಲಿ, ನಿಯೋಜನೆಯ ಬಗ್ಗೆ ಹೆಚ್ಚಿನ ನಿಯತತೆಯನ್ನು ಸುನಿಶ್ಚಿತ ಗೊಳಿಸುವ ಮತ್ತು ನಿಯೋಜನೆಯನ್ನು ವಿನಿಯಮನಗೊಳಿಸುವ ದೃಷ್ಟಿಯಿಂದ, ಹಡಗು ಕಟ್ಟೆ ಕೆಲಸಗಾರರ ಮತ್ತು ನಿಯೋಜಕರ ನೋಂದಣಿಗಾಗಿ ಯೋಜನೆಯ ಮೂಲಕ ಅವಕಾಶವನ್ನು ಕಲ್ಪಿಸಬಹುದು.—

(2) ವಿಶೇಷವಾಗಿ, ಯೋಜನೆಯು—

(ಕ) ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಹಡಗುಕಟ್ಟೆ ಕೆಲಸಗಾರರ ಮತ್ತು ನಿಯೋಜಕರ ವರ್ಗಗಳಿಗೆ ಆ ಯೋಜನೆಯನ್ನು ಅನ್ವಯಿಸುವುದಕ್ಕಾಗಿ;

(ಖ) ಯಾವ ಬಾಧ್ಯತೆಗಳನ್ನು ನೆರವೇರಿಸುವುದಕ್ಕೆ ಒಳಪಟ್ಟು ಹಡಗು ಕಟ್ಟೆ ಕೆಲಸಗಾರರಿಗೆ ಮತ್ತು ನಿಯೋಜಕರಿಗೆ ಯೋಜನೆಯನ್ನು ಅನ್ವಯಿಸ ಬಹುದೋ ಆ ಬಾಧ್ಯತೆಗಳನ್ನು ಮತ್ತು ಯಾರೇ ಹಡಗುಕಟ್ಟೆ ಕೆಲಸಗಾರರಿಗೆ ಅಥವಾ ನಿಯೋಜಕರಿಗೆ ಯಾವ ಸನ್ನಿವೇಶಗಳಲ್ಲಿ ಅಂಥ ಯೋಜನೆಯು ಅನ್ವಯವಾಗುವುದು ಮುಕ್ತಾಯವಾಗತಕ್ಕದೋ ಆ ಸನ್ನಿವೇಶಗಳನ್ನು ಪರಿಭಾಷಿಸುವುದಕ್ಕಾಗಿ;

(ಗ) ರಿಜಿಸ್ಟರುಗಳನ್ನು ಇಟ್ಟುಕೊಳ್ಳುವುದನ್ನು, ರಿಜಿಸ್ಟರುಗಳಿಂದ ಹೆಸರುಗಳನ್ನು ತಾತ್ಕಾಲಿಕವಾಗಿ ಅಥವಾ ಖಾಯಂ ಆಗಿ ತೆಗೆದು ಹಾಕುವುದನ್ನು ಮತ್ತು ನೋಂದಣಿಗಾಗಿ ಫೀಜು ವಿಧಿಸುವುದನ್ನು ಒಳಗೊಂಡು, ಹಡಗುಕಟ್ಟೆಕೆಲಸಗಾರರ ನೌಕರಿ ಭರ್ತಿಯನ್ನು ಮತ್ತು ಅವರನ್ನು ಆ ಯೋಜನೆಯಲ್ಲಿ ಸೇರಿಸಿಕೊಳ್ಳುವುದನ್ನು, ಹಾಗೂ ಹಡಗುಕಟ್ಟೆ ಕೆಲಸಗಾರರ ಮತು ನಿಯೋಜಕರ ನೋಂದಣಿಯನ್ನು ವಿನಿಯಮನಗೊಳಿಸುವುದಕ್ಕಾಗಿ

(ಘ) ಹಡಗುಕಟ್ಟೆ ಕೆಲಸಗಾರರ, ಅವರು ನೋಂದಾಯಿತರಾಗಿರಲಿ ಇಲ್ಲದಿರಲಿ, ನಿಯೋಜನೆಯನ್ನು ಮತ್ತು ಪರಿಶ್ರಮಧನದ ದರಗಳನ್ನು, ಕೆಲಸದ ವೇಳೆಯನ್ನು ಮತ್ತು ರಜಾದಿನಗಳ ಮತ್ತು ಆ ಸಂಬಂಧದ ವೇತನದ ಬಗೆಗಿನ ಷರತ್ತುಗಳನ್ನು ಒಳಗೊಂಡು ಅಂಥ ನಿಯೋಜನೆಯ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ವಿನಿಯಮನಗೊಳಿಸುವುದಕ್ಕಾಗಿ ;

(ಙ) ಯಾರಿಗೆ ಯೋಜನೆಯು ಅನ್ವಯವಾಗುವುದೋ ಮತ್ತು ಕೆಲಸ ಮಾಡಲು ಯಾರು ಸಿಕ್ಕುತ್ತಾರೋ ಆ ಹಡಗು ಕಟ್ಟೆ ಕೆಲಸಗಾರರಿಗೆ ಯಾವ ಅವಧಿಗಳಲ್ಲಿ ನಿಯೋಜನೆಯು ಅಥವಾ ಪೂರ್ಣ ನಿಯೋಜನೆಯು ದೊರಕುವುದಿಲ್ಲವೋ ಆ ಅವಧಿಗಳಿಗೆ ಸಂಬಂಧಿಸಿ, ಅಂಥ ಕೆಲಸಗಾರರು, ಯೋಜನೆಯ ಷರತ್ತುಗಳಿಗೊಳಪಟ್ಟು ಕನಿಷ್ಠ ವೇತನ ಪಡೆಯುವುದನ್ನು ಸುನಿಶ್ಚಿತಗೊಳಿಸುವುದಕ್ಕಾಗಿ ;

(ಚ) ಈ ಯೋಜನೆಯು ಅನ್ವಯವಾಗದಿರುವ ಹಡಗುಕಟ್ಟೆ ಕೆಲಸಗಾರರ ನಿಯೋಜನೆಯನ್ನು ಮತ್ತು ಈ ಯೋಜನೆಯು ಅನ್ವಯಿಸದಿರುವ ನಿಯೋಜಕರು ಹಡಗುಕಟ್ಟೆ ಕೆಲಸಗಾರರನ್ನು ನಿಯೋಜಿಸಿಕೊಳ್ಳುವುದನ್ನು ನಿಷೇಧಿಸುವುದಕ್ಕಾಗಿ, ನಿರ್ಬಂಧಿಸುವುದಕ್ಕಾಗಿ ಅಥವಾ ಅನ್ಯಥಾ ನಿಯಂತ್ರಿಸುವುದಕ್ಕಾಗಿ ;

(ಚಚ) ಆ ಯೋಜನೆಗಳ ಉದ್ದೇಶಗಳಿಗಾಗಿ ಅವಶ್ಯಕವಾಗಬಹುದಾದಂಥ ಅಥವಾ ವಿಹಿತವಾಗಬಹುದಾದಂಥ ನಿಧಿಯನ್ನು ಅಥವಾ ನಿಧಿಗಳನ್ನು ಸೃಜಿಸುವುದಕ್ಕಾಗಿ ಮತ್ತು ಅಂಥ ನಿಧಿಯ ಅಥವಾ ನಿಧಿಗಳ ಆಡಳಿತ ನಿರ್ವಹಣೆಗಾಗಿ ;

(ಛ) ಹಡಗು ಕಟ್ಟೆ ಕೆಲಸಗಾರರ ತರಬೇತಿಗೆ ಮತ್ತು ಕಲ್ಯಾಣಕ್ಕೆ ಸಂಬಂಧಿಸಿ, ಈ ಯೋಜನೆಯನ್ನುಳಿದು ತೃಪ್ತಿಕರವಾದ ಉಪಬಂಧವಿರದಿದ್ದರೆ, ಅದಕ್ಕಾಗಿ ;

(ಛಛ) ಮಂಡಲಿಯ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿಯ ಕಲ್ಯಾಣಕ್ಕಾಗಿ ;

(ಜ) ಹಡಗು ಕಟ್ಟೆ ಕೆಲಸಗಾರರು ನಿಯೋಜಿತರಾಗಿದ್ದ ಸ್ಥಳಗಳಲ್ಲಿ ಆರೋಗ್ಯ ಮತ್ತು ಸುರಕ್ಷಣಾ ಕ್ರಮಗಳಿಗೆ ಸಂಬಂಧಿಸಿ, ಈ ಯೋಜನೆಯನ್ನುಳಿದು, ತೃಪ್ತಿಕರವಾದ ಉಪಬಂಧವಿರದಿದ್ದರೆ, ಅದಕ್ಕಾಗಿ ;

(ಝ) ಈ ಯೋಜನೆಯನ್ನು ಕಾರ್ಯಗತಗೊಳಿಸುವ ಖರ್ಚನ್ನು ಯಾವ ರೀತಿಯಲ್ಲಿ, ಮತ್ತು ಯಾವ ವ್ಯಕ್ತಿಗಳು ಭರಿಸಬೇಕು ಎಂಬುದಕ್ಕಾಗಿ;

(ಞ) ಈ ಯೋಜನೆಯನ್ನು ನಿರ್ವಹಿಸಲು ಜವಾಬ್ದಾರವಾಗಿರಬೇಕಾದ ಪ್ರಾಧಿಕಾರವನ್ನು ರಚಿಸುವುದಕ್ಕಾಗಿ ;

(ಟ) ಈ ಯೋಜನೆಯ ಉದ್ದೇಶಗಳಿಗಾಗಿ ಅವಶ್ಯಕವಾಗಬಹುದಾದಂಥ ಅಥವಾ ವಿಹಿತವಾಗಬಹುದಾದಂಥ ಪ್ರಾಸಂಗಿಕ ಮತ್ತು ಪೂರಕ ವಿಷಯಗಳ ಬಗೆ ;- ಉಪಬಂಧಿಸಬಹುದು.

(3) ಯೋಜನೆಯ ಯಾವುದೇ ಉಪಬಂಧದ ಉಲ್ಲಂಘನೆಯು, ನಿರ್ದಿಷ್ಟಪಡಿಸಬಹುದಾದಂಥ ಅವಧಿಯ ಕಾರಾವಾಸದಿಂದ ಆದರೆ ಪ್ರಥಮ ಉಲ್ಲಂಘನೆಯ ಸಂದರ್ಭದಲ್ಲಿ ಮೂರು ತಿಂಗಳಿಗೆ ಮೀರದ ಅಥವಾ ತರುವಾಯದ ಉಲ್ಲಂಘನೆಯ ಸಂದರ್ಭದಲ್ಲಿ ಆರು ತಿಂಗಳುಗಳಿಗೆ ಮೀರದ ಅಥವಾ ನಿರ್ದಿಷ್ಟಪಡಿಸಬಹುದಾದಂಥ ಮೊಬಲಗಿನ ಜುಲ್ಮಾನೆಯಿಂದ, ಆದರೆ ಪ್ರಥಮ ಉಲ್ಲಂಘನೆಯ ಸಂದರ್ಭದಲ್ಲಿ ಐದು ನೂರು ರೂಪಾಯಿಗಳಿಗೆ ಮೀರದ ಅಥವಾ ತರುವಾಯದ ಉಲ್ಲಂಘನೆಯ ಸಂದರ್ಭದಲ್ಲಿ ಒಂದು ಸಾವಿರ ರೂಪಾಯಿ ಗಳಿಗೆ ಮೀರದ, ಅಥವಾ ಮೇಲೆ ಹೇಳಿದಂತೆ ಕಾರಾವಾಸ ಮತ್ತು ಜುಲ್ಮಾನೆ ಎರಡರಿಂದಲೂ ದಂಡನೀಯವಾಗತಕ್ಕುದೆಂದು ಯೋಜನೆಯು ಮತ್ತೂ ಉಪಬಂಧಿಸಬಹುದು.

4. ಯೋಜನೆಯನ್ನು ರಚಿಸುವುದು, ವ್ಯತ್ಯಾಸಗೊಳಿಸುವುದು ಮತ್ತು ಹಿಂತೆಗೆದುಕೊಳ್ಳುವುದು.—(1) ಸರ್ಕಾರವು, ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ಮತ್ತು ಪೂರ್ವ ಪ್ರಕಟಣೆಯ ಷರತ್ತಿಗೊಳಪಟ್ಟು ಒಂದು ಬಂದರಿಗಾಗಿ ಅಥವಾ ಬಂದರುಗಳ ಗುಂಪಿಗಾಗಿ ಒಂದು ಅಥವಾ ಹೆಚ್ಚು ಯೋಜನೆಗಳನ್ನು ರಚಿಸಬಹುದು, ಮತ್ತು ಅದೇ ರೀತಿಯಲ್ಲಿ ಹಾಗೂ ಅದೇ ಷರತ್ತಿಗೆ ಒಳಪಟ್ಟು, ತಾನು ರಚಿಸಿದ ಯಾವುದೇ ಯೋಜನೆಗೆ ಏನನ್ನಾದರೂ ಸೇರಿಸಬಹುದು, ಅದನ್ನು ತಿದ್ದುಪಡಿ ಮಾಡಬಹುದು, ವ್ಯತ್ಯಾಸಗೊಳಿಸಬಹುದು ಅಥವಾ ಹಿಂತೆಗೆದುಕೊಳ್ಳಬಹುದು.

(2) ಸಾಮಾನ್ಯ ಖಂಡಗಳ ಅಧಿನಿಯಮ, 1897ರ (1897ರ 10ರ) 23ನೇ ಪ್ರಕರಣದ ಉಪಬಂಧಗಳು, ಪೂರ್ವ ಪ್ರಕಟಣೆಯ ಷರತ್ತಿಗೊಳಪಟ್ಟು ನಿಯಮಗಳನ್ನು ರಚಿಸಲು ಕೇಂದ್ರ ಅಧಿನಿಯಮದ ಮೂಲಕ ಕೊಡಲಾದ ಅಧಿಕಾರವನ್ನು ಚಲಾಯಿಸಲು ಅವು ಅನ್ವಯವಾಗುವಂತೆಯೇ (1)ನೇ ಉಪ-ಪ್ರಕರಣದ ಮೂಲಕ ಕೊಡಲಾದ ಅಧಿಕಾರವನ್ನು ಚಲಾಯಿಸಲು ಅನ್ವಯವಾಗತಕ್ಕುದು.

(3) ಯಾವುದೇ ಬಂದರಿನ ಬಂದರು ಪ್ರಾಧಿಕಾರಕ್ಕೆ ಕಾಲಕಾಲಕ್ಕೆ ಕೊಡಬಹುದಾದಂಥ ಅನುದೇಶಗಳಿಗನುಸಾರವಾಗಿ ಒಂದು ಅಥವಾ ಹೆಚ್ಚು ಕರಡು ಯೋಜನೆಗಳನ್ನು ಬಂದರಿಗಾಗಿ ತಯಾರಿಸಲು ಸರ್ಕಾರವು ಅದಕ್ಕೆ ನಿರ್ದೇಶಿಸಬಹುದು, ಮತ್ತು ಬಂದರು ಪ್ರಾಧಿಕಾರವು ಅಂಥ ನಿರ್ದೇಶವನ್ನು ಪಾಲಿಸತಕ್ಕುದು.

5. ಸಲಹಾ ಸಮಿತಿಗಳು.—(1) ಈ ಅಧಿನಿಯಮದ ನಿರ್ವಹಣೆಯಿಂದ ಅಥವಾ ಅದರ ಮೇರೆಗೆ ರಚಿತವಾದ ಯಾವುದೇ ಯೋಜನೆಯಿಂದ ಉದ್ಭವಿಸಿದ್ದು, ಸಲಹೆಗಾಗಿ ಸರ್ಕಾರವು ಅದಕ್ಕೆ ಕಳಿಸಿಕೊಡಬಹುದಾದ ವಿಷಯಗಳ ಬಗ್ಗೆ ಸಲಹೆಯನ್ನು ಕೊಡಲು ಒಂದು ಸಲಹಾ ಸಮಿತಿಯನ್ನು ಸರ್ಕಾರವು ರಚಿಸಬಹುದು, ಅಥವಾ 4ನೇ ಪ್ರಕರಣದ ಮೇರೆಗೆ ಯಾವುದೇ ಯೋಜನೆಯನ್ನು ತಯಾರಿಸಲು ಅದು ನಿರ್ಧರಿಸಿದರೆ, ಸಲಹಾ ಸಮಿತಿಯನ್ನು ರಚಿಸತಕ್ಕುದು.

(2) ಸಲಹಾ ಸಮಿತಿಯ ಸದಸ್ಯರನ್ನು ಸರ್ಕಾರವು ನೇಮಿಸತಕ್ಕುದು ಮತ್ತು ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಬಹುದಾದಂತೆ ಸದಸ್ಯರ ಸಂಖ್ಯೆ ಹಾಗು ಅವರನ್ನು ಆಯ್ಕೆ ಮಾಡುವ ರೀತಿಯು ಇರತಕ್ಕುದು:

ಪರಂತು ಸಲಹಾ ಸಮಿತಿಯು—

(i) ಸರ್ಕಾರವನ್ನು,

(ii) ಹಡಗು ಕಟ್ಟೆ ಕೆಲಸಗಾರರನ್ನು, ಮತ್ತು

(iii) ಹಡಗು ಕಟ್ಟೆ ಕೆಲಸಗಾರರ ನಿಯೋಜಕರನ್ನು, ಮತ್ತು ಹಡಗು ಸಾಗಣೆ ಕಂಪನಿಗಳನ್ನು,

—ಪ್ರತಿನಿಧಿಸುವ ಸಮಾನ ಸಂಖ್ಯೆಯ ಸದಸ್ಯರನ್ನೊಳಗೊಂಡಿರತಕ್ಕುದು

(3) ಸಲಹಾ ಸಮಿತಿಯ ಅಧ್ಯಕ್ಷನು. ಈ ಬಗ್ಗೆ ಸರ್ಕಾರವನ್ನು ಪ್ರತಿನಿಧಿಸಲು ಸರ್ಕಾರದಿಂದ ನಾಮನಿರ್ದೇಶಿತರಾದ ಸದಸ್ಯರಲ್ಲಿ ಒಬ್ಬನಾಗಿರತಕ್ಕುದು.

(4) ಸಲಹಾ ಸಮಿತಿಯ ಎಲ್ಲ ಸದಸ್ಯರ ಹೆಸರುಗಳನ್ನು ಸರ್ಕಾರವು ಸರ್ಕಾರೀ ರಾಜಪತ್ರದಲ್ಲಿ ಪ್ರಕಟಿಸತಕ್ಕುದು.

5ಕ. ಹಡಗು ಕಟ್ಟೆ ಕಾರ್ಮಿಕ ಮಂಡಲಿಗಳು.—(1) ಒಂದು ಬಂದರಿಗಾಗಿ ಅಥವಾ ಬಂದರುಗಳ ಗುಂಪಿಗಾಗಿ ಸರ್ಕಾರವು, ಸರ್ಕಾರೀ ರಾಜ್ಯಪತ್ರದಲ್ಲಿ ಅಧಿಸೂಚಿಸುವ ಮೂಲಕ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಹೆಸರಿನಿಂದ ಕರೆಯಬಹುದಾದ ಹಡಗು ಕಟ್ಟೆ ಕಾರ್ಮಿಕ ಮಂಡಲಿಯನ್ನು ಸ್ಥಾಪಿಸಬಹುದು.

(2) ಅಂಥ ಪ್ರತಿಯೊಂದು ಮಂಡಲಿಯು, ನಿರಂತರ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಹಾಗೂ ಆರ್ಜಿಸಲು, ಹೊಂದಲು ಮತ್ತು, ವಿಲೆಮಾಡಲು ಮತ್ತು ಕರಾರು ಮಾಡಿಕೊಳ್ಳಲು ಅಧಿಕಾರವುಳ್ಳ ಮೇಲೆಹೇಳಿದ ಹೆಸರನ್ನುಳ್ಳ ನಿಗಮಿತ ನಿಕಾಯವಾಗಿರತಕ್ಕುದು ಮತ್ತು ಆ ಹೆಸರಿನಿಂದ ದಾವೆ ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು.

(3) ಅಂಥ ಪ್ರತಿಯೊಂದು ಮಂಡಲಿಯಲ್ಲಿ ಅಧ್ಯಕ್ಷನು ಮತ್ತು ಸರ್ಕಾರವುನೇಮಿಸಬಹುದಾದಷ್ಟು ಸಂಖ್ಯೆಯ ಇತರ ಸದಸ್ಯರು ಇರತಕ್ಕುದು:

ಪರಂತು, ಅಂಥ ಪ್ರತಿಯೊಂದು ಮಂಡಲಿಯು—

(i) ಸರ್ಕಾರವನ್ನು,

(ii) ಹಡಗು ಕಟ್ಟೆ ಕೆಲಸಗಾರರನ್ನು, ಮತ್ತು

(iii) ಹಡಗುಕಟ್ಟೆ ಕೆಲಸಗಾರರ ನಿಯೋಜಕರನ್ನು, ಮತ್ತು ಹಡಗು ಸಾಗಣೆ ಕಂಪನಿಗಳನ್ನು,

—ಪ್ರತಿನಿಧಿಸುವ ಸಮಾನ ಸಂಖ್ಯೆಯ ಸದಸ್ಯರನ್ನು ಒಳಗೊಂಡಿರತಕ್ಕುದು.

(4) ಮಂಡಲಿಯ ಅಧ್ಯಕ್ಷನು ಈ ಬಗ್ಗೆ ಸರ್ಕಾರವನ್ನು ಪ್ರತಿನಿಧಿಸಲು. ಸರ್ಕಾರದಿಂದ ನಾಮನಿರ್ದೇಶಿತರಾದ ಸದಸ್ಯರಲ್ಲಿ ಒಬ್ಬನಾಗಿರತಕ್ಕುದು.

5ಖ. ಮಂಡಲಿಯ ಪ್ರಕಾರ್ಯಗಳು.—(1) ಒಂದು ಬಂದರಿಗಾಗಿ ಅಥವಾ ಬಂದರುಗಳ ಗುಂಪಿಗಾಗಿ ಇರುವ ಯಾವ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕಾಗಿ ಒಂದು ಮಂಡಲಿಯನ್ನು ಸ್ಥಾಪಿಸಲಾಗಿದೆಯೋ ಅದಕ್ಕೆ ಆ ಮಂಡಲಿಯು ಜವಾಬ್ದಾರವಾಗಿರತಕ್ಕುದು ಮತ್ತು ಆ ಯೋಜನೆಯಿಂದ ತನಗೆ ಪ್ರದತ್ತವಾಗಬಹುದಾದಂಥ ಅಧಿಕಾರಗಳನ್ನು ಅದು ಚಲಾಯಿಸತಕ್ಕುದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕುದು.

(2) ತನ್ನ ಅಧಿಕಾರಗಳನ್ನು ಚಲಾಯಿಸುವಲ್ಲಿ ಮತ್ತು ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಸರ್ಕಾರವು ಬರಹದಲ್ಲಿ ತಿಳಿಸಬೇಕಾದ ಕಾರಣಗಳಿಗಾಗಿ ಕಾಲಕಾಲಕ್ಕೆ ತನಗೆ ಕೊಡಬಹುದಾದಂಥ ನಿರ್ದೇಶನಗಳಿಗೆ ಮಂಡಲಿಯು ಬದ್ಧವಾಗಿರತಕ್ಕುದು.

5ಗ. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.—(1) ಪ್ರತಿಯೊಂದು ಮಂಡಲಿಯು ಸರಿಯಾದ ಲೆಕ್ಕ ಪತ್ರಗನಳ್ನು ಮತ್ತು ಇತರ ಸಂಸಂಬದ್ಧ ದಾಖಲೆಗಳನ್ನು ಇಟ್ಟುಕೊಂಡು ಬರತಕ್ಕದ್ದು ಮತ್ತು ಶಿಲ್ಕು ಪತ್ರವನ್ನೊಳಗೊಂಡ ವಾರ್ಷಿಕ ಲೆಕ್ಕಪತ್ರಗಳ ಪಟ್ಟಿಯನ್ನು ಈ ಅಧಿನಿಯಮದ ಮೇರೆಗೆ ರಚಿತವಾದ ನಿಯಮಗಳ ಮೂಲಕ ನಿಯಮಿಸಬಹುದಾದಂಥ ನಮೂನೆಯಲ್ಲಿ ತಯಾರಿಸತಕ್ಕದ್ದು.

(2) ಮಂಡಲಿಯ ಲೆಕ್ಕಪತ್ರಗಳನ್ನು ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ಲನು ಅಥವಾ ಕಂಪನಿಗಳಿಗೆ ಸಂಬಂಧಿಸಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ಲೆಕ್ಕಪರಿಶೋಧಕರಾಗಿ ಕೆಲಸ ಮಾಡಲು ಅರ್ಹತೆಯನ್ನು ಹೊಂದಿದ್ದು, ಸರ್ಕಾರವು ನೇಮಿಸಬಹುದಾದಂಥ, ಇತರ ಲೆಕ್ಕಪರಿಶೋಧಕರು ಲೆಕ್ಕ ಪರಿಶೋಧನೆಯನ್ನು ಪ್ರತಿ ವರ್ಷವೂ ಮಾಡತಕ್ಕದ್ದು.

(3) ಮಂಡಲಿಯ ಲೆಕ್ಕಪತ್ರಗಳ ಪುಸ್ತಕಗಳನ್ನು ಮತ್ತು ಇತರ ದಸ್ತಾವೇಜುಗಳನ್ನು, ಎಲ್ಲ ಯುಕ್ತ ಕಾಲಗಳಲ್ಲಿ ಪರಿಶೀಲಿಸಲು ಲೆಕ್ಕ ಪರಿಶೋಧಕರಿಗೆ ಪ್ರವೇಶವಿರತಕ್ಕದ್ದು ಮತ್ತು, ಲೆಕ್ಕ ಪರಿಶೋಧನೆಯ ಉದ್ದೇಶಗಳಿಗಾಗಿ ತಮಗೆ ಅಗತ್ಯವಾಗಬಹುದಾದಂಥ ವಿವರಣೆಯನ್ನು ಮತ್ತು ಮಾಹಿತಿಯನ್ನು ಅವರು ತರಿಸಿಕೊಳ್ಳಬಹುದು ಅಥವಾ ಮಂಡಲಿಯ ಯಾವನೇ ಸದಸ್ಯನನ್ನು ಅಥವಾ ಅಧಿಕಾರಿಯನ್ನುಪರೀಕ್ಷಿಸಬಹುದು.

(4) ಮಂಡಲಿಯ ಲೆಕ್ಕಪತ್ರಗಳ ಪರಿಶೋಧಿತ ಪ್ರತಿಯೊಂದಿಗೆ ತಮ್ಮ ವರದಿಯ ಪ್ರತಿಯೊಂದನ್ನು ಲೆಕ್ಕ ಪರಿಶೋಧಕರು ಸರ್ಕಾರಕ್ಕೆ ಕಳಿಸತಕ್ಕದ್ದು.

(5) ಲೆಕ್ಕಪತ್ರ ಪರಿಶೋಧನೆಯ ಖರ್ಚನ್ನು, ಸರ್ಕಾರವು ನಿಗದಿಪಡಿಸಿದಂತೆ, ಮಂಡಲಿಯ ನಿಧಿಯಿಂದ ಸಂದಾಯ ಮಾಡತಕ್ಕದ್ದು.

6. ಪರಿಶೀಲಕರು.—(1) ಸರ್ಕಾರವು, ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಬಂದರುಗಳಲ್ಲಿ, ಈ ಅಧಿನಿಯಮದ ಉದ್ದೇಶಗಳಿಗಾಗಿ ಪರಿಶೀಲಕರನ್ನಾಗಿ ತಾನು ಸೂಕ್ತವೆಂದು ಆಲೋಚಿಸುವಂಥ ವ್ಯಕ್ತಿಗಳನ್ನು ನೇಮಿಸಬಹುದು.

(2) ಪ್ರತಿಯೊಬ್ಬ ಪರಿಶೀಲಕನನ್ನು ಭಾರತ ದಂಡಸಂಹಿತೆ, 1860ರ ಅರ್ಥ ವ್ಯಾಪ್ತಿಯಲ್ಲಿ ಲೋಕನೌಕರನೆಂದು ಭಾವಿಸತಕ್ಕದ್ದು.

(3) ಪರಿಶೀಲಕನು, ತನ್ನನ್ನು ಯಾವ ಬಂದರಿಗಾಗಿ ನೇಮಿಸಲಾಗಿದೆಯೋ ಆ ಬಂದರಿನಲ್ಲಿ—

(ಕ) ಹಡಗುಕಟ್ಟೆ ಕೆಲಸಗಾರರು ನಿಯೋಜಿತರಾಗಿರುವ ಯಾವುದೇ ಆವರಣವನ್ನು ಅಥವಾ ನೌಕೆಯನ್ನು, ತಾನು ಸೂಕ್ತವೆಂದು ಆಲೋಚಿಸುವಂಥ ಸಹಾಯದೊಂದಿಗೆ (ಯಾವುದಾದರೂ ಇದ್ದರೆ) ಪ್ರವೇಶಿಸಬಹುದು ;

(ಖ) ಹಡಗುಕಟ್ಟೆ ಕೆಲಸಗಾರರಿಗೆ ಸಂಬಂಧಿಸಿದ ಯಾವುದೇ ರಿಜಿಸ್ಟರನ್ನು, ಹಾಜರಿಪಟ್ಟಿಯನ್ನು ಅಥವಾ ಇತರ ದಸ್ತಾವೇಜನ್ನು ಹಾಜರುಪಡಿಸಲು ಯಾವುದೇ ಪ್ರಾಧಿಕಾರವನ್ನು ಅಥವಾ ವ್ಯಕ್ತಿಯನ್ನು ಅಗತ್ಯಪಡಿಸಬಹುದು, ಮತ್ತು ಅಂಥ ದಸ್ತಾವೇಜನ್ನು ಪರೀಕ್ಷಿಸಬಹುದು ;

(ಗ) ಬಂದರಿಗಾಗಿ ರಚಿಸಲಾದ ಯಾವುದೇ ಯೋಜನೆಯ ಉಪಬಂಧಗಳನ್ನು ಪಾಲಿಸಲಾಗುತ್ತಿದೆಯೇ ಅಥವಾ ಪಾಲಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಯಾವನೇ ವ್ಯಕ್ತಿಯ ಸಾಕ್ಷ್ಯವನ್ನು ಸ್ಥಳದಲ್ಲಿಯೇ ಅಥವಾ ಅನ್ಯಥಾ ತೆಗೆದುಕೊಳ್ಳಬಹುದು.

(4) ಯೋಜನೆಯ ಯಾವುದೇ ಉಪಬಂಧದ ಉಲ್ಲಂಘನೆಯ ಬಗ್ಗೆ ಫಿರ್ಯಾದುಗಳನ್ನು ಯಾವ ರೀತಿಯಲ್ಲಿ ಮತ್ತು ಯಾವ ವ್ಯಕ್ತಿಗಳು ಪರಿಶೋಧಕನಿಗೆ ಸಲ್ಲಿಸಬಹುದೆಂಬುದನ್ನು ಮತ್ತು ಅಂಥ ಫಿರ್ಯಾದುಗಳಿಗೆ ಸಂಬಂಧಿಸಿ ಪರಿಶೀಲಕನ ಕರ್ತವ್ಯಗಳೇನೆಂಬುದನ್ನು ಸರ್ಕಾರವು ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ, ನಿಯಮಿಸಬಹುದು.

6ಕ. ವಿಚಾರಣೆಗೆ ಆದೇಶಿಸುವ ಅಧಿಕಾರ.—(1) ಮಂಡಲಿಯ ಕಾರ್ಯ ನಿರ್ವಹಣೆಯ ಬಗ್ಗೆ ತನಿಖೆಯನ್ನು ಅಥವಾ ವಿಚಾರಣೆಯನ್ನು ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸುವಂತ ಯಾವನೇ ವ್ಯಕ್ತಿಯನ್ನು ಸರ್ಕಾರವು ಯಾವುದೇ ಕಾಲದಲ್ಲಿ ನೇಮಕವಾಡಬಹುದು.

(2) ಹಾಗೆ ನೇಮಿತನಾದ ವ್ಯಕ್ತಿಗೆ, ತನಿಖೆಯನ್ನು ಅಥವಾ ವಿಚಾರಣೆಯನ್ನು ಸರಿಯಾಗಿ ನಡೆಸಲು ಮಂಡಲಿಯು ಎಲ್ಲ ಸೌಲಭ್ಯಗಳನ್ನು ಒದಗಿಸತಕ್ಕದ್ದು ಮತ್ತು ಮಂಡಲಿಯ ಸ್ವಾಧೀನದಲ್ಲಿದ್ದು ಅವನು ಅಗತ್ಯಪಡಿಸಬಹುದಾದಂಥ ದಸ್ತಾವೇಜುಗಳನ್ನು, ಲೆಕ್ಕಪತ್ರಗಳನ್ನು ಅಥವಾ ಮಾಹಿತಿಯನ್ನು ಅವನಿಗೆ ಒದಗಿಸತಕ್ಕದ್ದು.

6ಖ. ಮಂಡಲಿಯನ್ನು ಅಧಿಕ್ರಮಿಸುವ ಅಧಿಕಾರ.—(1) 6ಕ ಪ್ರಕರಣದ ಮೇರೆಗಿನ ವರದಿಯನ್ನು ಪರ್ಯಾಲೋಚಿಸಿದ ಮೇಲೆ, ಅಥವಾ ಅನ್ಯಥಾ ಸರ್ಕಾರವು—

(ಕ) ತೀವ್ರ ತುರ್ತುಪರಿಸ್ಥಿತಿಯ ಕಾರಣದಿಂದಾಗಿ, ಮಂಡಲಿಯು ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅಸಮರ್ಥವಾಗಿದೆಯೆಂದು, ಅಥವಾ

(ಖ) ಮಂಡಲಿಯು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಸತತವಾಗಿ ತಪ್ಪಿದೆಯೆಂದು ಅಥವಾ ತನ್ನ ಅಧಿಕಾರಗಳನ್ನು ಅತಿಕ್ರಮಿಸಿದೆಯೆಂದು ಅಥವಾ ದುರುಪಯೋಗಪಡಿಸಿಕೊಂಡಿದೆಯೆಂದು, ಅಭಿಪ್ರಾಯಪಟ್ಟರೆ, ಸರ್ಕಾರವು ಸರ್ಕಾರೀ ರಾಜ್ಯಪತ್ರದಲ್ಲಿ ಅಧಿಸೂಚಿಸುವ ಮೂಲಕ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಮಂಡಲಿಯನು ಅಧಿಕ್ರಮಿಸಬಹುದು :

ಪರಂತು, (ಖ) ಖಂಡದಲ್ಲಿ ಉಲ್ಲೇಖಿಸಲಾದ ಆಧಾರಗಳ ಪೈಕಿ ಯಾವುದೇ ಆಧಾರದ ಮೇಲೆ ಈ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವ ಮುಂಚೆ, ಮಂಡಲಿಯನ್ನು ಏಕೆ ಅಧಿಕ್ರಮಿಸಬಾರದೆಂಬುದಕ್ಕೆ ಕಾರಣ ತೋರಿಸಲು ಸರ್ಕಾರವು ಮಂಡಲಿಗೆ ಯುಕ್ತ ಅವಕಾಶವನ್ನು ಕೊಡತಕ್ಕದ್ದು ಮತ್ತು ಮಂಡಲಿಯ ವಿವರಣೆಗಳು ಮತ್ತುಆಕ್ಷೇಪಣೆಗಳು, ಯಾವುವಾದರೂ ಇದ್ದರೆ, ಅವುಗಳನ್ನು ಪರ್ಯಾಲೋಚಿಸತಕ್ಕದ್ದು.

(2) (1)ನೇ ಉಪ–ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಪ್ರಕಟಿಸಿದ ಮೇಲೆ,—

(ಕ) ಅಂಥ ಪ್ರಕಟಣೆಯ ದಿನಾಂಕದಿಂದ, ಮಂಡಲಿಯ ಎಲ್ಲ ಸದಸ್ಯರು ಅಂಥ ಸದಸ್ಯರಾಗಿ ತಮಗಿರುವ ಪದಗಳನ್ನು ತೆರವು ಮಾಡತಕ್ಕದ್ದು

(ಖ) ಮಂಡಲಿಯು ಚಲಾಯಿಸಬಹುದಾದ ಎಲ್ಲ ಅಧಿಕಾರಗಳನ್ನು ಮತ್ತು ನಿರ್ವಹಿಸಬಹುದಾದ ಎಲ್ಲ ಪ್ರಕಾರ್ಯಗಳನ್ನು, ಅಧಿಕ್ರಮಣದ ಅವಧಿಯಲ್ಲಿ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವ್ಯಕ್ತಿಯು ಚಲಾಯಿಸಬಹುದು ಅಥವಾ ನಿರ್ವಹಿಸಬಹುದು ;

(ಗ) ಮಂಡಲಿಯಲ್ಲಿ ನಿಹಿತವಾಗಿದ್ದ ಎಲ್ಲ ನಿಧಿಗಳು ಮತ್ತು ಇತರ ಸ್ವತ್ತು, ಅಧಿಕ್ರಮಣದ ಅವಧಿಯಲ್ಲಿ, ಸರ್ಕಾರದಲ್ಲಿ ನಿಹಿತವಾಗತಕ್ಕುದು.

(3) (1)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಅಧಿಕ್ರಮಣದ ಅವಧಿಯು ಮುಕ್ತಾಯವಾದ ಮೇಲೆ, ಸರ್ಕಾರವು—

(ಕ) ತಾನು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಹೆಚ್ಚಿನ ಅವಧಿಯವರೆಗೆ, ಅಧಿಕ್ರಮಣದ ಅವಧಿಯನ್ನು ವಿಸ್ತರಿಸಬಹುದು ; ಅಥವಾ

(ಖ) 5ಕ ಪ್ರಕರಣದಲ್ಲಿ ಉಪಬಂಧಿಸಲಾದ ರೀತಿಯಲ್ಲಿ ಮಂಡಲಿಯನ್ನು ಪುನಃ ಸ್ಥಾಪಿಸಬಹುದು.

6ಗ. ಮಂಡಲಿಯ ಮತ್ತು ಸಲಹಾ ಸಮಿತಿಯ ಕಾರ್ಯಗಳು ಅಥವಾ ವ್ಯವಹರಣೆಗಳು ಅಸಿಂಧುವಾಗತಕ್ಕುದಲ್ಲ.—ಮಂಡಲಿಯ ಅಥವಾ ಸಲಹಾ ಸಮಿತಿಯ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು—

(ಕ) ಮಂಡಲಿಯಲ್ಲಿನ ಅಥವಾ ಸಲಹಾ ಸಮಿತಿಯಲ್ಲಿನ ಯಾವುದೇ ಖಾಲಿ ಸ್ಥಾನದ, ಅಥವಾ ಅದರ ರಚನೆಯಲ್ಲಿನ ಯಾವುದೇ ನ್ಯೂನತೆಯ ಕಾರಣ ದಿಂದಾಗಿ, ಅಥವಾ

(ಖ) ಮಂಡಲಿಯ ಅಥವಾ ಸಲಹಾ ಸಮಿತಿಯ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯ ನೇಮಕದಲ್ಲಿನ ಯಾವುದೇ ನ್ಯೂನತೆಯ ಕಾರಣದಿಂದಾಗಿ, ಅಥವಾ

(ಗ) ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದ ಮಂಡಲಿಯ ಅಥವಾಸಲಹಾ ಸಮಿತಿಯ ಪ್ರಕ್ರಿಯೆಯಲ್ಲಿನ ಕ್ರಮದೋಷದ ಕಾರಣದಿಂದಾಗಿ, —ಮಾತ್ರವೇ ಅಸಿಂಧುವಾಗತಕ್ಕುದಲ್ಲ.

7. ಅಪರಾಧಗಳ ಸಂಜ್ಞೇಯತೆ.—(1) ಯೋಜನೆಯ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಅಥವಾ ಅದರ ದುಷ್ಪ್ರೇರಣೆಯನ್ನು, ಅಂಥ ಅಪರಾಧವನ್ನು ಅಥವಾ ದುಷ್ಪ್ರೇರಣೆಯನ್ನು ಉಂಟುಮಾಡುವ ಸಂಗತಿಗಳ ಬಗ್ಗೆ ಪರಿಶೀಲಕನು ಅಥವಾ ಈ ಬಗೆ ಸರ್ಕಾರದಿಂದ ವಿಶೇಷವಾಗಿ ಅಧಿಕೃತನಾದ ವ್ಯಕ್ತಿಯು ಲಿಖಿತದಲ್ಲಿ ಸಲ್ಲಿಸಿದ ವರದಿಯ ಮೇಲೆ ಹೊರತು, ಯಾವುದೇ ನ್ಯಾಯಾಲಯವು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕುದಲ್ಲ.

(2) ದಂಡ ಪ್ರಕ್ರಿಯಾ ಸಂಹಿತೆ, 1898ರಲ್ಲಿ ಏನೇ ಇದ್ದರೂ, ಯೋಜನೆಯ ಮೇರೆಗೆ ದಂಡನೀಯವಾದ ಅಪರಾಧವು ಅಥವಾ ಅದರ ದುಷ್ಪ್ರೇರಣೆಯು, ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟನಿಂದ ಅಥವಾ ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟನಿಂದ ಮಾತ್ರವೇ ಅಧಿ ವಿಚಾರಣೀಯವಾಗಿರತಕ್ಕುದು.

7ಕ. ಕಂಪನಿಗಳಿಂದ ಅಪರಾಧಗಳು.—(1) ಯೋಜನೆಯ ಮೇರೆಗೆ ದಂಡನೀಯವೆಂದು ಮಾಡಲಾಗಿರುವ ಯಾವುದೇ ಅಪರಾಧವನ್ನು ಅಥವಾ ಅದರ ದುಷ್ಪ್ರೇರಣೆಯನ್ನು ಮಾಡುವ ವ್ಯಕ್ತಿಯು ಕಂಪನಿಯಾಗಿದ್ದರೆ, ಆ ಅಪರಾಧವು ಅಥವಾ ದುಷ್ಪ್ರೇರಣೆಯು ನಡೆದ ಕಾಲದಲ್ಲಿ ಆ ಕಂಪನಿಯ ಆಗಳಿತವನ್ನು ಹೊಂದಿದ್ದ, ಮತ್ತು ಕಂಪನಿಯ ವ್ಯವಹಾರವನ್ನು ನಡೆಸಲು ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಕಂಪನಿಯನ್ನು ಸಹ ಆ ಅಪರಾಧದ ಅಥವಾ ದುಷ್ಪ್ರೇರಣೆಯ ಬಗ್ಗೆ ತಪ್ಪಿತಸ್ಥನೆಂದುಭಾವಿಸತಕ್ಕುದು ಮತ್ತು ತನ್ನ ವಿರುದ್ಧ ವ್ಯವಹರಣೆಗೆ ಗುರಿಯಾಗತಕ್ಕುದು ಮತ್ತು ತದನುಸಾರವಾಗಿ ದಂಡಿತನಾಗತಕ್ಕುದು :

ಪರಂತು, ಈ ಉಪ-ಪ್ರಕರಣದಲ್ಲಿ ಇರುವುದು ಯಾವುದೂ, ಆ ಅಪರಾಧವುಅಥವಾ ದುಷ್ಪ್ರೇರಣೆಯು ತನಗೆ ತಿಳಿಯದ ಹಾಗೆ ನಡೆಯಿತೆಂದು ಅಥವಾ ಅಂಥ ಅಪರಾಧವು, ಅಥವಾ ದುಷ್ಪ್ರೇರಣೆಯು ನಡೆಯುವುದನ್ನು ಪ್ರತಿಬಂಧಿಸಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ವ್ಯಕ್ತಿಯು ರುಜುವಾತುಪಡಿಸಿದರೆ ಅಂಥ ವ್ಯಕ್ತಿಯನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕುದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಯೋಜನೆಯ ಮೇರೆಗೆ ದಂಡನೀಯವೆಂದು ಮಾಡಲಾಗಿರುವ ಯಾವುದೇ ಅಪರಾಧವನ್ನು ಅಥವಾ ಅದರ ಯಾವುದೇ ದುಷ್ಪ್ರೇರಣೆಯನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಅಥವಾ ದುಷ್ಪ್ರೇರಣೆಯು ಕಂಪನಿಯ ಯಾವನೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ರುಜುವಾತಾದಲ್ಲಿ, ಅಥವಾ ಅವನ ಯಾವುದೇ ನಿರ್ಲಕ್ಷ್ಯತೆಯಿಂದ ನಡೆಯಿತೆಂದು ಹೇಳಬಹುದಾಗಿರುವಲ್ಲಿ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಅಥವಾ ದುಷ್ಪ್ರೇರಣೆಯ ಬಗ್ಗೆ ತಪ್ಪಿತಸ್ಥರೆಂದು ಭಾವಿಸತಕ್ಕುದು ಮತ್ತು ತಮ್ಮ ವಿರುದ್ಧ ವ್ಯವಹರಣೆಗೆ ಅವರು ಗುರಿಯಾಗತಕ್ಕುದು ಹಾಗೂ ತದನುಸಾರವಾಗಿ ದಂಡಿತರಾಗತಕ್ಕುದು.

ವಿವರಣೆ:—ಈ ಪ್ರಕರಣದ ಉದ್ದೇಶಗಳಿಗಾಗಿ,—

(ಕ) ''ಕಂಪನಿ'' ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಇದು ಫರ್ಮನ್ನು ಮತ್ತು ವ್ಯಕ್ತಿಗಳ ಇತರ ಸಂಘವನು ಒಳಗೊಳ್ಳುತ್ತದೆ ; ಮತ್ತು

(ಖ) ಫರ್ಮಿಗೆ ಸಂಬಂಧಿಸಿ ''ನಿರ್ದೇಶಕ'' ಎಂದರೆ, ಫರ್ಮಿನಲ್ಲಿನ ಪಾಲುಗಾರ :

8. ನಿಯಮ ರಚನಾಧಿಕಾರ.—(1) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಸರ್ಕಾರವು, ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು—

(ಕ) ಸಲಹಾ ಸಮಿತಿಗಳ ಮತ್ತು ಮಂಡಲಿಗಳ ರಚನೆಯ ಬಗ್ಗೆ ಮತ್ತು ಸಲಹಾ ಸಮಿತಿಯ ಮತ್ತು ಮಂಡಲಿಗಳ ಸದಸ್ಯರುಗಳನ್ನು ಆಯ್ಕೆ ಮಾಡುವ ರೀತಿಯ ಬಗ್ಗೆ ;

(ಖ) ಮಂಡಲಿಯ ಅಥವಾ ಸಲಹಾ ಸಮಿತಿಯ ಸದಸ್ಯರ ಪದಾವಧಿಯ ಬಗ್ಗೆ ಮತ್ತು ಅವರಲ್ಲಿ ಆಕಸ್ಮಿಕವಾಗಿ ತೆರವಾಗುವ ಸ್ಥಾನಗಳನ್ನು ಭರ್ತಿಮಾಡುವ ರೀತಿಯ ಬಗ್ಗೆ ;

(ಗ) ಮಂಡಲಿಯ ಮತ್ತು ಸಲಹಾ ಸಮಿತಿಯ ಸಭೆಗಳ ಬಗ್ಗೆ ; ಅಂಥ ಸಭೆಗಳ ಕೋರಂ ಬಗ್ಗೆ ಮತ್ತು ಅಲ್ಲಿನ ಕಾರ್ಯ ನಡವಳಿಕೆಯ ಬಗ್ಗೆ ;

(ಘ) ಮಂಡಲಿಯು ಅಥವಾ ಮಂಡಲಿಯ ಪರವಾಗಿ ಕರಾರನ್ನು ಯಾವ ಷರತ್ತುಗಳಿಗೊಳಪಟ್ಟು, ಮತ್ತು ಯಾವ ಬಗೆಯಲ್ಲಿ ಮಾಡಿಕೊಳ್ಳಬಹುದೆಂಬ ಬಗ್ಗೆ ;

(ಙ) ಮಂಡಲಿಯ ಅಥವಾ ಸಲಹಾ ಸಮಿತಿಯ ಸದಸ್ಯರುಗಳಿಗೆ ಸಂದಾಯ ಮಾಡಬೇಕಾದ ಭತ್ಯಗಳೇನಾದರೂ ಇದ್ದರೆ, ಆ ಬಗ್ಗೆ ;

(ಚ) ಮಂಡಲಿಯ ಸದಸ್ಯತ್ವಕ್ಕೆ ಅನರ್ಹತೆಗಳ ಬಗ್ಗೆ ;

(ಛ) ಮಂಡಲಿಯು ತನ್ನ ಲೆಕ್ಕಪತ್ರಗಳ ವಾರ್ಷಿಕ ವಿವರ ಪಟ್ಟಿಕೆಯನ್ನು ಮತ್ತು ಶಿಲ್ಕು ಪತ್ರವನು ತಯಾರಿಸಬೇಕಾದ ನಮೂನೆಯ ಬಗ್ಗೆ ಉಪಬಂಧಿಸಬಹುದು.

8ಕ. ಯೋಜನೆಗಳನ್ನು ಮತ್ತು ನಿಯಮಗಳನ್ನು ಸಂಸತ್ತಿನ ಮುಂದೆ ಇರಿಸುವುದು :—ಕೇಂದ್ರ ಸರ್ಕಾರವು ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ಯೋಜನೆಯನ್ನು ಹಾಗೂ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ಅನಂತರ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನ ದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಇರಿಸತಕ್ಕದ್ದು, ಮತ್ತು ಅದನ್ನು ಹಾಗೆ ಇರಿಸಲಾದ ಅಧಿವೇಶನವು ಅಥವಾ ಅದಕ್ಕೆ ನಿಕಟ ತರುವಾಯದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ ಆ ಯೋಜನೆಯಲ್ಲಿ ಅಥವಾ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ಯೋಜನೆಯನ್ನು ಅಥವಾ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ಯೋಜನೆಯು ಅಥವಾ ನಿಯಮವು ತದನಂತರ, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ಶೂನ್ಯತೆಯು ಆ ಯೋಜನೆಯ ಅಥವಾ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗದಂತೆ ಇರತಕ್ಕದ್ದು.

9. ಉಳಿಸುವಿಕೆ.—ಹಡಗುಕಟ್ಟೆ ಕೆಲಸಗಾರರ (ನಿಯೋಜನಾ ವಿನಿಯಮನ) ತಿದ್ದುಪಡಿ ಅಧಿನಿಯಮ, 1962ರ ಪ್ರಾರಂಭಕ್ಕೆ ಮುಂಚೆ, ಆ ಅಧಿನಿಯಮದ 4ನೇ ಪ್ರಕರಣದ ಮೇರೆಗೆ ಒಂದು ಬಂದರಿಗಾಗಿ ಅಥವಾ ಬಂದರುಗಳ ಗುಂಪಿಗಾಗಿ ಸ್ಥಾಪಿತವಾದ ಪ್ರತಿಯೊಂದು ಹಡಗುಕಟ್ಟೆ ಕಾರ್ಮಿಕ ಮಂಡಲಿಯನ್ನು, ಮತ್ತು ಅಂಥ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಹಾಗೆಂದು ಕೆಲಸ ಮಾಡುತ್ತಿರುವ ಮಂಡಲಿಯನ್ನು 5ಕ ಪ್ರಕರಣದ ಮೇರೆಗೆ ಸ್ಥಾಪಿತವಾದ ಮಂಡಲಿ ಎಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ, ಈ ಅಧಿನಿಯಮದ ಎಲ್ಲ ಉಪಬಂಧಗಳು ಅಂಥ ಪ್ರತಿಯೊಂದು ಮಂಡಲಿಗೆ ಅನ್ವಯಿಸತಕ್ಕದ್ದು.

W.D. P 4161